# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 719 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12/07/2023 |
| ಉತ್ತರಿಸುವ ಸಚಿವರು | : | ಮಾನ್ಯ ಸಚಿವರು ಲೋಕೋಪಯೋಗಿ ಇಲಾಖೆ. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹರಪ್ಪನಹಳ್ಳಿ ತಾಲ್ಲೂಕಿನ ಜಿಗಟೇರಿ ಗ್ರಾಮ ಹಾಗೂ ಕಾಂಭಟ್ರಹಳ್ಳಿ ಸಮೀಪ ಪ್ರವಾಸಿ ಮಂದಿರಗಳನ್ನು ನಿರ್ಮಾಣ ಮಾಡಿರುವುದು ನಿಜವೇ; ಹಾಗಿದ್ದಲ್ಲಿ, ಯಾವ ವರ್ಷದಲ್ಲಿ ಇವುಗಳ ಉದ್ಘಾಟನೆ ಮಾಡಲಾಯಿತು; ಮತ್ತು ಇವುಗಳ ನಿರ್ಮಾಣಕ್ಕಾದ ವೆಚ್ಚವೆಷ್ಟು;</td><td>ಹರಪ್ಪನಹಳ್ಳಿ ತಾಲ್ಲೂಕಿನ ಜಿಗಟೇರಿ ಗ್ರಾಮ ಹಾಗೂ ಕಾಂಭಟ್ರಹಳ್ಳಿ ಸಮೀಪದಲ್ಲಿರುವ ಪ್ರವಾಸಿ ಮಂದಿರಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಪ್ರವಾಸಿ ಮಂದಿರ ಇರುವ ಸ್ಥಳ</th><th>ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)</th><th>ವೆಚ್ಚ</th><th>ನಿರ್ಮಾಣ ಮಾಡಲಾದ ವರ್ಷ</th></tr>
<tr><td>ಜಿಗಟೇರಿ</td><td>40.00</td><td>39.90</td><td>2010</td></tr>
<tr><td>ಕಾಂಭಟ್ರಹಳ್ಳಿ</td><td>30.00</td><td>29.95</td><td>2010</td></tr>
</table>
</td></tr>
<tr><td>ಆ)</td><td>ಈ ಕಟ್ಟಡಗಳ ನಿರ್ಮಾಣದ ಉದ್ದೇಶಗಳೇನು; ಇದರಿಂದ ಆಗುತ್ತಿರುವ ಉಪಯೋಗಗಳೇನು; ಉಪಯೋಗಕ್ಕೆ ಬಾರದಿದ್ದಲ್ಲಿ ಈ ಕಟ್ಟಡಗಳನ್ನು ಇಲ್ಲಿ ಕಟ್ಟಲು ಕಾರಣವೇನು; ಇದರಿಂದ ಸರ್ಕಾರದ ಹಣ ಪೋಲು ಆಗಿರುವುದು ನಿಜವೇ; ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)</td><td rowspan="2">ಜಿಗಟೇರಿ ಗ್ರಾಮದಲ್ಲಿ ಪ್ರಖ್ಯಾತ ಶ್ರೀ ನಾರದಮುನಿ ದೇವಸ್ಥಾನ ಇರುವುದರಿಂದ ಭಕ್ತಾಧಿಗಳು ಹಾಗೂ ಪ್ರವಾಸಿಗರು ಭೇಟಿ ನೀಡುವುದರಿಂದ 260 ಚ.ಮೀ. ವಿಸ್ತೀರ್ಣದ ಒಂದು ಕೊಠಡಿ ಹೊಂದಿರುವ ಪ್ರವಾಸಿ ಮಂದಿರವನ್ನು ನಿರ್ಮಾಣ ಮಾಡಲಾಗಿದೆ. ಸದರಿ ಪ್ರವಾಸಿ ಮಂದಿರವನ್ನು ಪ್ರವಾಸಿಗರಿಗೆ ನೀಡಲಾಗುತ್ತಿದ್ದು ಬಳಕೆಯಾಗುತ್ತಿದೆ. ಇದರ ವಾರ್ಷಿಕ ಆದಾಯ ಅಂದಾಜು ರೂ. 6,000/- ಇರುತ್ತದೆ.<br>ಕಾಂಭಟ್ರಹಳ್ಳಿ ಗ್ರಾಮದ ಸುತ್ತ-ಮುತ್ತಲು ಅರಣ್ಯ ಪ್ರದೇಶವಿದ್ದು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭೇಟಿ ನೀಡುವುದರಿಂದ 260 ಚ.ಮೀ. ವಿಸ್ತೀರ್ಣದ ಒಂದು ಕೊಠಡಿ ಹೊಂದಿರುವ ಪ್ರವಾಸಿ ಮಂದಿರವನ್ನು ನಿರ್ಮಾಣ ಮಾಡಲಾಗಿದ್ದು, ಸದರಿ ಕೊಠಡಿಯನ್ನು ಇಲ್ಲಿಗೆ ಭೇಟಿ ನೀಡುವ ಅಧಿಕಾರಿಗಳಿಗೆ / ಜನಪ್ರತಿನಿಧಿಗಳಿಗೆ ಕಾಯ್ದಿರಿಸಲಾಗುತ್ತಿದೆ.</td></tr>
<tr><td>ಇ)</td><td>ಈ ಕಟ್ಟಡಗಳನ್ನು ಬಳಸದೆ ಮತ್ತು ಸರ್ಕಾರಿ ಜಾಗಗಳಲ್ಲಿ ಖಾಸಗಿ ಜನರು ಮನೆ ಮಾಡಿಕೊಂಡು ವಾಹನಗಳ ನಿಲುಗಡೆಗೆ ಬಳಸುತ್ತಿರುವುದು ನಿಜವೇ; ಹಾಗಿದ್ದಲ್ಲಿ ಇದಕ್ಕೆ ಅವಕಾಶ ಮಾಡಿಕೊಟ್ಟಿರುವವರು ಯಾರು; ಕಾರಣಗಳೊಂದಿಗೆ ಮಾಹಿತಿ ನೀಡುವುದು;</td></tr>
</table>

| | | |
|---|---|---|
| | | ಸರ್ಕಾರಿ ಜಾಗದಲ್ಲಿ ಖಾಸಗಿ ಜನರು ಯಾವುದೇ ಮನೆಗಳನ್ನು ನಿರ್ಮಿಸಿಕೊಂಡಿರುವುದಿಲ್ಲ. ಪ್ರಸ್ತುತ ಚಿಗಟೇರಿ ಗ್ರಾಮದ ಹತ್ತಿರ ಹರಪನಹಳ್ಳಿ ಉಪ-ವಿಭಾಗ ವ್ಯಾಪ್ತಿಯ ಇಟ್ಟಿಗಿ-ಕಂಚಿಕೇರಿ ರಾಜ್ಯ ಹೆದ್ದಾರಿ-151 ರ ರಸ್ತೆಯನ್ನು ಎಸ್.ಹೆಚ್.ಡಿ.ಪಿ. ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದ ವಾಹನಗಳನ್ನು ತಾತ್ಕಾಲಿಕವಾಗಿ ಪ್ರವಾಸಿ ಮಂದಿರದ ಹತ್ತಿರ ನಿಲುಗಡೆ ಮಾಡಲಾಗುತ್ತಿದೆ. ಆದರೆ ಪ್ರವಾಸಿ ಮಂದಿರದ ಆವರಣದ ಒಳಗಡೆ ವಾಹನಗಳ ನಿಲುಗಡೆಗೆ ಯಾವುದೇ ಪರವಾನಿಗೆ ನೀಡಿರುವುದಿಲ್ಲ. |
| ಈ) | ಸರ್ಕಾರಿ ಜಾಗವನ್ನು ಖಾಸಗಿಯವರಿಗೆ ನೀಡಲು ಅವಕಾಶವಿದೆಯೇ; ಇಲ್ಲವಾದಲ್ಲಿ ಸರ್ಕಾರಿ ಜಾಗವನ್ನು ಬಳಕೆ ಮಾಡಿಕೊಳ್ಳಲು ಅವಕಾಶ ನೀಡಿರುವವರು ಯಾರು ಮತ್ತು ಯಾವ ಆಧಾರದ ಮೇಲೆ ಜಾಗವನ್ನು ನೀಡಲಾಗಿದೆ; ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆಯೇ; (ವಿವರ ನೀಡುವುದು) | ಸರ್ಕಾರಿ ಜಾಗವನ್ನು ಖಾಸಗಿಯವರಿಗೆ ನೀಡಲು ಅವಕಾಶವಿರುವುದಿಲ್ಲ. ಅದರಂತೆ, ಸದರಿ ಸರ್ಕಾರಿ ಜಾಗವನ್ನು ಖಾಸಗಿಯವರಿಗೆ ಬಳಕೆ ಮಾಡಿಕೊಳ್ಳಲು ಅವಕಾಶ ನೀಡಿರುವುದಿಲ್ಲ. |
| ಉ) | ಲೋಕೋಪಯೋಗಿ ಇಲಾಖೆಯ ಕಟ್ಟಡಗಳು ಇಲಾಖೆಗೆ ಅವಶ್ಯವಿಲ್ಲದಿದ್ದಲ್ಲಿ ಪಕ್ಕದಲ್ಲಿಯೇ ಇರುವ ಬಂಧೀಖಾನೆ ಇಲಾಖೆಯ ಜೈಲು ಸಿಬ್ಬಂದಿಗಳ ಉಪಯೋಗಕ್ಕೆ ಅಥವಾ ಗ್ರಾಮ ಪಂಚಾಯಿತಿಗೆ ನೀಡಲು ಪತ್ರ ವ್ಯವಹಾರ ನಡೆಸಲು ಮತ್ತು ಅದರಿಂದ ಬರುವ ಆದಾಯವನ್ನು ಇಲಾಖೆಯು ಬಳಸಿಕೊಳ್ಳಲು ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು) | ಚಿಗಟೇರಿ ಪ್ರವಾಸಿ ಮಂದಿರವನ್ನು ಪ್ರವಾಸಿಗರಿಗೆ ನೀಡಲಾಗುತ್ತಿದೆ. ಲೋಕೋಪಯೋಗಿ ಇಲಾಖೆಗೆ ಅವಶ್ಯವಿದ್ದು, ಇದರ ಸರಾಸರಿ ಅಂದಾಜು ವಾರ್ಷಿಕ ಆದಾಯ ರೂ.6000/- ಇರುತ್ತದೆ.<br><br>ಕಾಂಭಟ್ರಹಳ್ಳಿಯಲ್ಲಿ ಇರುವ ಪ್ರವಾಸಿ ಮಂದಿರವನ್ನು ಜನಪ್ರತಿನಿಧಿಗಳಿಗೆ /ಅಧಿಕಾರಿಗಳಿಗೆ ನೀಡಲು ಕಾಯ್ದಿರಿಸಲಾಗುತ್ತಿದ್ದು ಲೋಕೋಪಯೋಗಿ ಇಲಾಖೆಗೆ ಅವಶ್ಯವಿರುತ್ತದೆ. |

**ಸಂಖ್ಯೆ: ಲೋಇ 27 ಬಿಎಲ್ ಕ್ಯೂ 2023**

**(ಸತೀಶ್ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.
**ಸತೀಶ ಜಾರಕಿಹೊಳಿ**
**ಲೋಕೋಪಯೋಗಿ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 719ಕ್ಕೆ ಪೂರಕ ಟಿಪ್ಪಣಿ**

******

**ಚಿಗಟೇರಿ ಪ್ರವಾಸಿ ಮಂದಿರ:**

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಗ್ರಾಮದಲ್ಲಿ ಅಪರೂಪದ ಪ್ರಖ್ಯಾತ ಶ್ರೀ ನಾರದಮುನಿ ದೇವಸ್ಥಾನ ಇದ್ದು, ಈ ದೇವಸ್ಥಾನಕ್ಕೆ ಬಹಳಷ್ಟು ಜನ ಭಕ್ತಾಧಿಗಳು, ಯಾತ್ರಿಗಳು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಆಗಮಿಸುತ್ತಿರುತ್ತಾರೆ. ಇಲ್ಲಿಗೆ ಆಗಮಿಸುವ ಎಲ್ಲರಿಗೂ ಅನುಕೂಲವಾಗುವಂತೆ, ಲೋಕೋಪಯೋಗಿ ಇಲಾಖೆಯಿಂದ ಪ್ರವಾಸಿ ಮಂದಿರವನ್ನು 2010ನೇ ಸಾಲಿನಲ್ಲಿ ಅಂದಾಜು ಮೊತ್ತ ರೂ. 40.00 ಲಕ್ಷಗಳಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ಈ ಪ್ರವಾಸಿ ಮಂದಿರದ ಪ್ಲಿಂತ್ ಏರಿಯಾ 260.00 ಚದರ ಮೀಟರ್‌ಗಳು ಇರುತ್ತದೆ. ಈ ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ನಿರ್ಮಾಣ ಮಾಡಲಾಗಿದ್ದು, ಕೇವಲ ಒಂದು ಕೊಠಡಿಯನ್ನು ಹೊಂದಿದ್ದು, ಸದರಿ ಪ್ರವಾಸಿ ಮಂದಿರವು ಇಟ್ಟಿಗಿ-ಕಂಚಿಕೇರಿ ರಾಜ್ಯ ಹೆದ್ದಾರಿ-151 ರ ಕಿ.ಮೀ. 17.50 ರಲ್ಲಿ ಎಡಭಾಗದಲ್ಲಿದ್ದು, ಎಕ್ಕುಂಬಿ - ಮೊಳಕಾಲ್ಮೂರು ರಾಜ್ಯ ಹೆದ್ದಾರಿ-2 ರಿಂದ ಸುಮಾರು 700 ಮೀಟರ್‌ಗಳ ಅಂತರದಲ್ಲಿರುತ್ತದೆ. ಪ್ರವಾಸಿಗರಿಗೆ ಪ್ರವಾಸಿ ಮಂದಿರವನ್ನು ನೀಡಲಾಗುತ್ತಿದ್ದು, ಇದರಿಂದ ಸರಾಸರಿ ಅಂದಾಜು ವಾರ್ಷಿಕ ಆದಾಯ ರೂ.6000/- ಇದ್ದು, ಲೋಕೋಪಯೋಗಿ ಇಲಾಖೆಗೆ ಅವಶ್ಯವಿರುತ್ತದೆ.

**ಕಾಂಭಟ್ರಹಳ್ಳಿ ಪ್ರವಾಸಿ ಮಂದಿರ:**

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಕಾಂಭಟ್ರಹಳ್ಳಿ ಗ್ರಾಮದ ಹತ್ತಿರ ಕಾಯ್ದಿಟ್ಟ ಅರಣ್ಯ ಪ್ರದೇಶ ಹಾಗೂ ಗುಂಡಗತ್ತಿ ಗ್ರಾಮದಲ್ಲಿ ಪ್ರಖ್ಯಾತ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಹರಪನಹಳ್ಳಿ ತಾಲ್ಲೂಕಿನ ಉಪ ಕಾರಾಗೃಹ ಇರುತ್ತದೆ. ಉಪ ಕಾರಾಗೃಹದ ಹತ್ತಿರ ಕಾಯ್ದಿಟ್ಟ ಅರಣ್ಯ ಪ್ರದೇಶ ಹಾಗೂ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಬಹಳಷ್ಟು ಭಕ್ತಾಧಿಗಳು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಆಗಮಿಸುತ್ತಿರುತ್ತಿದ್ದು, ಇವರಿಗಾಗಿ ಕೊಠಡಿಯನ್ನು ಕಾಯ್ದಿರಿಸಲಾಗುತ್ತಿದೆ. ಕಾಂಭಟ್ರಹಳ್ಳಿ ಗ್ರಾಮದ ಸಮೀಪ ಲೋಕೋಪಯೋಗಿ ಇಲಾಖೆಯಿಂದ ಪ್ರವಾಸಿ ಮಂದಿರವನ್ನು 2010 ನೇ ಸಾಲಿನಲ್ಲಿ ರೂ. 30.00 ಲಕ್ಷಗಳ ವೆಚದಲ್ಲಿ ನಿರ್ಮಿಸಲಾಗಿದ್ದು. ಈ ಪ್ರವಾಸಿ ಮಂದಿರದ ಪ್ಲಿಂತ್ ಏರಿಯಾ 260.00 ಚದರ ಮೀಟರ್‌ಗಳು ಇರುತ್ತದೆ. ಈ ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ನಿರ್ಮಾಣ ಮಾಡಲಾಗಿದ್ದು, ಕೇವಲ ಒಂದು ಕೊಠಡಿಯನ್ನು ಹೊಂದಿರುತ್ತದೆ. ಈ ಪ್ರವಾಸಿ ಮಂದಿರವು ದಾವಣಗೆರೆ-ಹೊಳಲು ರಾಜ್ಯ ಹೆದ್ದಾರಿ-150ರ 32.00 ಕಿ.ಮೀ ಎಡಭಾಗದಲ್ಲಿದ್ದು, ಹರಪನಹಳ್ಳಿ ಪಟ್ಟಣದಿಂದ ಸುಮಾರು 06 ಕಿ.ಮೀ. ಗಳ ಅಂತರದಲ್ಲಿರುತ್ತದೆ.

ಸದರಿ ಪ್ರವಾಸಿ ಮಂದಿರಗಳ ಹತ್ತಿರ ಸರ್ಕಾರಿ ಜಾಗದಲ್ಲಿ ಖಾಸಗಿ ಜನರು ಯಾವುದೇ ಮನೆಗಳನ್ನು ನಿರ್ಮಿಸಿಕೊಂಡಿರುವುದಿಲ್ಲ, ಹಾಗೂ ರಾಜ್ಯ ಹೆದ್ದಾರಿ-151 ರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದ ವಾಹನಗಳನ್ನು ತಾತ್ಕಾಲಿಕವಾಗಿ ಪ್ರವಾಸಿ ಮಂದಿರದ ಹತ್ತಿರ ನಿಲುಗಡೆ ಮಾಡಲಾಗುತ್ತಿದೆ. ಆದರೆ ಪ್ರವಾಸಿ ಮಂದಿರದ ಒಳಗಡೆ ವಾಹನಗಳ ನಿಲುಗಡೆಗೆ ಯಾವುದೇ ಪರವಾನಿಗೆ ನೀಡಿರುವುದಿಲ್ಲ.

ಚಿಗಟೇರಿ ಹಾಗೂ ಕಾಂಭಟ್ರಹಳ್ಳಿ, ಗ್ರಾಮಗಳ ಸಮೀಪದಲ್ಲಿರುವ ಪ್ರವಾಸಿ ಮಂದಿರಗಳು ವಿಶ್ರಾಂತಿ ಪಡೆಯಲು ಹಾಗೂ ವಸತಿ ಮಾಡಲು ಅನುಕೂಲವಾಗಿದ್ದು, ಇವುಗಳನ್ನು ಉನ್ನತಿಕರಿಸಿದಲ್ಲಿ ಭಕ್ತಾಧಿಗಳು, ಪ್ರವಾಸಿಗರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಪರಿವೀಕ್ಷಣೆಗೆ ಭೇಟಿ ನೀಡಲು ಇನ್ನಷ್ಟು ಅನುಕೂಲವಾಗುವುದು.